

ಸಭಾಂಗಣದ ಪ್ರವೇಶ ದ್ವಾರದಲ್ಲಿ ಮೆನ್‌ಹಿರ್‌ನಂತೆ ನೇರ ನಿಲ್ಲಿಸಿದ ಅಗ್ನಿಶಿಲೆಯ ಕಂಬಗಳು

ಹರಡಿ ಬಿದ್ದಿರುವ ಬೃಹತ್ ಕಲ್ಲುದಿಮ್ಮಿಗಳು ಕಂಡವು. ಅವನ್ನು 'ಬಸಾಲ್ಟಿಕ್–ಆಂಡಿಸೈಟ್ ಕಾಲಮ್ನಾರ್ ಜಾಯಿಂಟ್ಸ್' ಎನ್ನುತ್ತಾರೆ. ಶಿಲಾಪಾಕ ನಿರ್ದಿಷ್ಟ ತಾಪಮಾನ ಮತ್ತು ಒತ್ತಡದಲ್ಲಿ ನಿಧಾನವಾಗಿ ಘನೀಕರಿಸಿ, ಹರಳುಗಟ್ಟಿ ರೂಪುಗೊಂಡ ಅಗ್ನಿಶಿಲೆಗಳು. ಕಣ್ಣುಗಳು ಕಾಣುತ್ತಿದ್ದ ಮೋಹಕ ದೃಶ್ಯವನ್ನು, ಈ ವಿಹಂಗಮ ನೋಟವನ್ನು ಕ್ಯಾಮೆರಾದಲ್ಲಿ ಸೆರೆಹಿಡಿಯಲು ಸಾಧ್ಯವೇ ಇರಲಿಲ್ಲ.

ಒಂದೊಂದಾಗಿ 370 ಎತ್ತೆತ್ತರದ ಮೆಟ್ಟಿಲುಗಳನ್ನು ಏರಿದ್ದೆವು. ನಮ್ಮ ಎಡಕ್ಕೂ ಬಲಕ್ಕೂ ಶಿಲಾದಿಮ್ಮಿಗಳ ಬಲವಾದ ಗೋಡೆ ಕಾಣಿಸಿತು. ಪ್ರಕೃತಿ ನಿರ್ಮಿಸಿದ ಶಿಲೆಗಳು ಇವು. ಆದರೆ, ಅವನ್ನು ಸುಮಾರು ಒಂದರಿಂದ ಎರಡು ಮೀಟರ್ ಉದ್ದಕ್ಕೆ ಕತ್ತರಿಸಿ ಸಾವಿರ ಸಂಖ್ಯೆಯಲ್ಲಿ ಅಡ್ಡಡ್ಡವಾಗಿ ಮಲಗಿಸಿ, ಈ ಭದ್ರವಾದ ತಡೆಗೋಡೆ ನಿರ್ಮಾಣವಾಗಿತ್ತು. ಪ್ರಾಗೈತಿಹಾಸಿಕ ಮಾನವನ ದೈತ್ಯ ಪ್ರಯತ್ನ, ಪರಿಶ್ರಮ ಎದ್ದು ಕಾಣುತ್ತಿದೆ.

ತಡೆಗೋಡೆಯನ್ನು ದಾಟಿ ಮೆಲ್ಲನೆ ಮೇಲೆ ಬಂದೆವು, ಕಣ್ಣರಳಿಸಿ ನೋಡಿದೆವು. ನಮ್ಮೆದುರು ತೆರೆದು ನಿಂತಿತ್ತು ಒಂದು ಅಲೌಕಿಕ ಲೋಕ. ಹಸಿರು ಹುಲ್ಲಿನ ನಡುವೆ ಹರಡಿ ನಿಂತ ಅಸಂಖ್ಯಾತ ಕಪ್ಪು ಶಿಲಾದಿಮ್ಮಿಗಳು, ಸಂಜೆ ಸೂರ್ಯನ ಬಂಗಾರದ ಕಿರಣಗಳಲ್ಲಿ ಹೊಳೆದು ಯಾವುದೋ ಅನ್ಯಗ್ರಹದ ಮೇಲೆ ಬಂದಿಳಿದ ರೋಮಾಂಚನದ ಅನುಭವ. ಇಲ್ಲಿ ಮತ್ಯಾರೂ ಇಲ್ಲದೆ ಇಡೀ ಬೆಟ್ಟವೇ ನಮ್ಮದಾಗಿ ಬೆರಗಿನ ಮೌನ. ಕಾಲ ತಟಸ್ಥ ನಿಂತಿದೆ ಇಲ್ಲಿ ಸಾವಿರ ಸಾವಿರ ವರ್ಷಗಳು, ಎಂಬಂತಹ ಭಾವ. ನಾವು ನಿಂತಿದ್ದೆವು ಆಗ್ನೇಯ ಏಷಿಯಾದ ಅತಿ ದೊಡ್ಡ ಮೆಗಲಿತಿಕ್ ತಾಣದಲ್ಲಿ.

ಒಂದೊಂದೇ ಹೆಜ್ಜೆ ಇಟ್ಟು ಅಚ್ಚರಿಯಿಂದ ನೋಡುತ್ತಿದ್ದೇವೆ, ಗುನುಂಗ್ ಪದಾಂಗ್ ಗುಡ್ಡ ಮೆಲ್ಲನೆ ತನ್ನ ಗುಟ್ಟು ಬಿಟ್ಟುಕೊಡುವಂತೆ ತೆರೆದುಕೊಳ್ಳುತ್ತಿದೆ. ಇಲ್ಲಿ ನಮ್ಮ ಎದುರಿಗೇ ಟಿಸಿಲೊಡೆದ ಮರವೊಂದು ನಿಂತಿತ್ತು. ಅದರ ಬುಡಕ್ಕೇ ಏರಿನಿಂತ ಮೆಟ್ಟಿಲುಗಳು. ಒಂದು ಕಾಲಕ್ಕೆ ನಿಖರವಾಗಿ ಜೋಡಿಸಿದ್ದ ಕಲ್ಲುಗಳು ಇಂದು ಕುಸಿದು ಅರೆ ನಿಂತು, ಅರೆ ಮಲಗಿ ಉರುಳಿವೆ. ಆದರೂ ಮಾನವ ನಿರ್ಮಿತ ಮೆಟ್ಟಿಲುಗಳು ಎಂದು ಗೋಚರಿಸುತ್ತಿದೆ. ಇದೋ ಆಯತಾಕಾರದ ಕೋಣೆ, ಸಭಾಂಗಣ ಸ್ಪಷ್ಟವಾಗಿ ಕಾಣುತ್ತಿವೆ. ಯಾವುದೋ ನಿಗೂಢ ಆಚರಣೆಗೆಂದು ಕಟ್ಟಿದ ಕಟ್ಟಡಗಳ ಪಳೆಯುಳಿಕೆಗಳು. ಸುತ್ತಲೂ ಗೋಡೆಯಂತೆ ನಿಲ್ಲಿಸಿದ ಶಿಲಾಸ್ತಂಭಗಳು ಬಾಗಿದ್ದರೂ ಸರಹದ್ದನ್ನು ಗುರುತಿಸಬಹುದಿತ್ತು. ಪ್ರತಿ ಪ್ರವೇಶ ದ್ವಾರದಲ್ಲಿ ಮೆನ್‌ಹಿರ್‌ನಂತೆ ನೇರ ನಿಲ್ಲಿಸಿದ ಸ್ವಲ್ಪ ದೊಡ್ಡದಾದ ಅಗ್ನಿಶಿಲೆಯ ಕಂಬಗಳು.

ಮೆಟ್ಟಿಲು ಹತ್ತಿ ನಾವು ಬಂದದ್ದು ಗುಡ್ಡದ ಮೇಲಿನ ಮೊದಲ ಮಾಳಿಗೆಗೆ. ಇದನ್ನು 'ಟೆರೇಸ್ 1' ಎನ್ನುತ್ತಾರೆ. ಈ ಮಾಳಿಗೆಯಿಂದ ಎರಡನೇ ಮಾಳಿಗೆಗೆ ಏರಲು ಅವೇ ಅಗ್ನಿಶಿಲೆಗಳ ಮೆಟ್ಟಿಲು. ಈ ಗುಡ್ಡದ ಮೇಲೆ ಐದು ಮಾಳಿಗೆಗಳಿವೆ. ಮೊದಲ ಮಾಳಿಗೆ ವಿಶಾಲವಾಗಿದೆ. ಉಳಿದವುಗಳ ವಿಸ್ತಾರ ಕೊಂಚ ಕಡಿಮೆ. ಒಂದೊಂದು ಮಾಳಿಗೆಯಲ್ಲಿಯೂ ಮಂತ್ರಮುಗ್ಧರಾಗಿ ನಾವು ಸರಿದಾಡಿದೆವು, ಇಳಿದ ಸೂರ್ಯನ ಬೆಳಕಲ್ಲಿ ಹೊಳೆದ ಮಾಂತ್ರಿಕ ದೃಶ್ಯ. ಈ ಗುಡ್ಡ ನಂದಿಹೋದ ಜ್ವಾಲಾಮುಖಿಯ ಮೇಲೆ ಕುಳಿತಿದೆ! ಆದರೆ ಈ ಅಗ್ನಿಶಿಲೆಗಳು ಇಲ್ಲಿ ಇದೇ ಬೆಟ್ಟದಲ್ಲಿ ದೊರೆಯುವ ಕಲ್ಲುಗಳಲ್ಲ ಎಂಬುದೇ ಮತ್ತಷ್ಟು ದಿಗ್ಭ್ರಮೆ ತರಿಸುತ್ತದೆ. ಇಷ್ಟು ಭಾರದ ಬೃಹತ್ ಶಿಲೆಗಳನ್ನು ಅದೆಲ್ಲಿಂದ ಕತ್ತರಿಸಿ ಸಾಗಿಸಿ ಹೊತ್ತು ತಂದು, ಜೋಡಿಸಿದರು?

ಒಂದಾದ ಮೇಲೊಂದು ಐದು ಟೆರೇಸ್‌ಗಳು ನಮ್ಮೆದುರು ತೆರೆದುಕೊಂಡವು. ಅಷ್ಟು ಸಾವಿರ ವರ್ಷಗಳ ಹಿಂದೆ, ಆಗ್ನೇಯ ಏಷಿಯಾದ ಈ ಭಾಗದಲ್ಲಿ ಬೃಹತ್ ನಿರ್ಮಾಣವನ್ನು ಬೆಟ್ಟದ ನೆತ್ತಿಯಲ್ಲಿ ಕಟ್ಟಬಲ್ಲ ಕೌಶಲ, ಸಾಮರ್ಥ್ಯ, ತಾಂತ್ರಿಕತೆ ಇತ್ತೆಂಬುದೇ ಅದ್ಭುತ. 'ಗುನುಂಗ್ ಪದಾಂಗ್ ಶಿಖರದ ಮೇಲಿನ ಈ ಮೆಗಾಲಿತಿಕ್ ರಚನೆ ಸುಮಾರು 3000 ವರ್ಷಗಳಷ್ಟು ಹಳೆಯದು, ಅಗ್ನಿಶಿಲೆಗಳನ್ನು ಕತ್ತರಿಸಿ ಜೋಡಿಸಿ ನಿರ್ಮಿಸಿದ ಮಾಳಿಗೆಗಳಿವು' ಎಂದು ಅಕಡೆಮಿಕ್ ಜಗತ್ತು ಗುರುತಿಸಿದೆ. ಆದರೆ ಈ ಗುಡ್ಡದ ಒಡಲಾಳದಲ್ಲಿ, ಈ ಮಾಳಿಗೆಗಳ ಕೆಳಗೊಂದು ರಹಸ್ಯವಿದೆ. ತೀವ್ರ ವಾದ–ವಿವಾದಕ್ಕೆ ಎಡೆಮಾಡಿರುವ ವಿಸ್ಮಯವದು.

ಇನ್ನೂ ಬೆಳಕಿತ್ತು, ನಾಲ್ಕನೇ ಟೆರೇಸ್‌ಗೆ ಬಂದೆವು. ಆತ ಅಲ್ಲಿ ಒಂದು ಚಚ್ಚೌಕ ಕಲ್ಲುಗೋಡೆಗಳ ಒಳಗಿದ್ದ ಅತಿ ಭಾರದ ಕಲ್ಲನ್ನು ತೋರಿಸಿದ. ಇದನ್ನು 'ಕನುರಾಗನ್' ಶಿಲೆ ಎನ್ನುತ್ತಾರೆ, ಇದು ಶಕ್ತಿ ಪರೀಕ್ಷೆಯ ಸಂಕೇತವಾಗಿ ನಿಂತ ಕಲ್ಲು. ಇಲ್ಲಿಂದ ಐದನೇ ಮಾಡು ಎದುರಿಗೇ ಇತ್ತು. ನಾಲ್ಕರಿಂದ ಐದಕ್ಕಿದ್ದ ಮೆಟ್ಟಿಲುಗಳು ತೀರಾ ಕಿರಿದಾಗಲದವು. ಅಲ್ಲಿ ತುತ್ತತುದಿಯ ಒಂದು ಸಣ್ಣ ದಿಬ್ಬದಂತಹ ಜಾಗದಲ್ಲಿ ಇಂಡೊನೇಷಿಯಾದ ಅತ್ಯಂತ ಸರಳವಾದ ಕೆಂಪು–ಬಿಳಿ ಬಣ್ಣದ ಬಾವುಟ ಹಾರುತ್ತಿತ್ತು.

## ಸರ್ವಶಕ್ತ ಅಗ್ನಿಪರ್ವತ ಗೆಡೆ

ಕತ್ತಲು ಆವರಿಸುತ್ತಿತ್ತು. ಮುಸ್ಸಂಜೆಯ ನಸುಬೆಳಕು ಕಣ್ಣುಮಿಟುಕಿಸುವಂತಿತ್ತು. ಹಿಂದಕ್ಕೆ ತಿರುಗಿ ಮೊದಲ ಮಾಳಿಗೆಯ ಹಿಂಬದಿಗೆ ಬಂದು ನಿಂತಿದ್ದೆವು. ಇಲ್ಲಿ ಎದ್ದು ನಿಂತ ಮರದ ಬುಡದಲ್ಲಿ ಒಂದು ಕಾಲಕ್ಕೆ ನಿರ್ದಿಷ್ಟ ಆಕಾರದಲ್ಲಿ ಜೋಡಿಸಿದ್ದ ಬಹಳಷ್ಟು ಕಲ್ಲುಗಳು ಕುಸಿದಿದ್ದರೂ ದಿಬ್ಬದ ಸ್ವರೂಪ ಸ್ಪಷ್ಟವಿತ್ತು. ಆ ಯುವಕ, ಚಪ್ಪಲಿ ತೆಗೆದು ಆ ಪುಟ್ಟ ದಿಬ್ಬದ ಮೇಲೆ ಬರುವಂತೆ ಹೇಳಿದ. ಹಾಗೆಯೇ ಮಾಡಿದೆವು. ಆತ ಈಗ ನೇರ ಎದುರಿಗೆ ಉತ್ತರ ದಿಕ್ಕಿಗೆ ಕೈಮಾಡಿ ತೋರಿ 'ಗುನುಂಗ್ ಗೆಡೆ' ಎಂದು ಕೈಮುಗಿದ. ಅಲ್ಲಿತ್ತು ದಿಗಂತದ ಅಂಚಿನಲ್ಲಿ ಮುಸ್ಸಂಜೆಯ ಕೊನೆಯ ಬೆಳಕಲ್ಲಿ ಹೊಳೆದ 'ಮೌಂಟ್ ಗೆಡೆ' ಅಗ್ನಿಪರ್ವತ.

ಗೆಡೆ ಸ್ಥಳೀಯರಿಗೆ ಆಳವಾದ ಆಧ್ಯಾತ್ಮಿಕ ಅರ್ಥವಿರುವ ಬೆಟ್ಟ. ಗೆಡೆಯತ್ತ ಮುಖಮಾಡುವುದೆಂದರೆ, ಸರ್ವಶಕ್ತನತ್ತ ಮುಖಮಾಡಿ ನಿಂತಂತೆ.

ನಂತರದಲ್ಲಿ, ಈ ಶಿಖರದ ಮೇಲಿನ ಈ ಮಾಳಿಗೆಗಳು ಗೆಡೆ ಪರ್ವತದತ್ತ ನೋಡುತ್ತಿವೆ ಎಂದು ಸಂಶೋಧನಾ ಪ್ರಬಂಧಗಳು ತೋರಿದವು. 'ಇಂಡೋನೇಷಿಯಾದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ'ಯ ನಾಡಿಯಾ ಅಬ್‌ಶರೀನಾ ಇಡ್ರಿಸ್ ತಮ್ಮ ಸಂಶೋಧನಾ ಪ್ರಬಂಧದಲ್ಲಿ 'ತಾವು ಬದುಕುತ್ತಿರುವ ಸುತ್ತಲಿನ ಪರಿಸರಕ್ಕೆ ಹೊಂದಿಕೊಳ್ಳುವಂತೆ ಮಾನವನ ವರ್ತನೆ ಮತ್ತು ಸಂಸ್ಕೃತಿ ವಿಕಾಸಗೊಳ್ಳುತ್ತದೆ. ಹಾಗೆಯೇ ಒಂದು ಸ್ಥಳದಲ್ಲಿ ಒಂದು ಬಗೆಯ ತಂತ್ರಜ್ಞಾನ, ಕೌಶಲ ವಿಕಾಸಗೊಳ್ಳುವುದಕ್ಕೆ ಆ ಪರಿಸರಕ್ಕೆ ಹೊಂದಿಕೊಳ್ಳುವ ಅನಿವಾರ್ಯವಿರುತ್ತದೆ. ಗುನುಂಗ್ ಪದಾಂಗ್ ವಿಪತ್ತು ಪೀಡಿತ ತಾಣವಾಗಿತ್ತು' ಎಂದು ತಿಳಿಸಿದ್ದರು. ಗುನುಂಗ್ ಪದಾಂಗ್‌ನ ಶಿಖರದಲ್ಲಿಯ ಮೊದಲ ಮಾಳಿಗೆಯ ಆ ದಿಬ್ಬ ನೇರವಾಗಿ ಗೆಡೆ ಅಗ್ನಿಪರ್ವತವನ್ನು ದಿಟ್ಟಿಸುತ್ತದೆ. ಬಲು ನಿಖರವಾಗಿ ಗೆಡೆಗೆ ಅಭಿಮುಖವಾಗಿರುವಂತೆ ಈ ಟೆರೇಸ್‌ನ ಕೋನದ ರಚನೆ ಇದೆ. ಗೆಡೆ ಇವತ್ತಿಗೂ ಸಕ್ರಿಯವಾಗಿರುವ ಜ್ವಾಲಾಮುಖಿ. ಗೆಡೆ ಆಸ್ಫೋಟವಾಗುವ ಸೂಚನೆಯನ್ನು, ಲಕ್ಷಣಗಳನ್ನು ಆದಷ್ಟು ಮೊದಲೇ ಅವಲೋಕಿಸಿ ಮುನ್ನೆಚ್ಚರಿಕೆ ನೀಡುವ ಉದ್ದೇಶವಿದ್ದಿರಬಹುದೇ?